ಕಲಿಯೋದೇ ತುಂಬ ಇರತ್ತೆ ಅಂತೆಲ್ಲ ಆಸೆ ಪಟ್ಕೊಂಡು ಅವರ ತಾಯಿಯನ್ನ ಕರೆಸಿಕೊಂಡರು. ವೆಂಕಟರಾಯರು ಪಾಪ, ಭಾನುವಾರ ಅವರ ತಾಯಿಯನ್ನು ಕರಕೊಂಡು ಬಂದರೆ ಶ್ರೀನಿವಾಸರಾಯರು 'ಬಾ, ಬಾಮ್ಮ' ಅಂತ ಸಂಭ್ರಮಿಸಿದರೆ ಅಹಲ್ಯಬಾಯಿ ಉಭ ಇಲ್ಲ, ಶುಭ ಇಲ್ಲ. ಕಡೆಗೆ ರಾಯರೇ ತಮ್ಮನಿಗೂ, ಅಮ್ಮನಿಗೂ ಕಾಫಿ ಮಾಡಿ ಕೊಡಬೇಕಾಯಿತು. ಅವರ ತಾಯಿ ಮೊದಲಿನಿಂದಲೂ ತುಂಬ ಅಚ್ಚುಕಟ್ಟು. ಶಾರದಮ್ಮನವರ ಅಡಿಗೆಮನೆ ಅಂದರೆ ಅಡಿಗೆಮನೆ ಅಂತ ನೆಂಟರಿಷ್ಟರಲ್ಲೆಲ್ಲ ಹೆಸರುವಾಸಿ. ಸ್ವಲ್ಪ ಸುಧಾರಿಸಿಕೊಂಡಮೇಲೆ ಅವರು 'ಅಹಲ್ಯ, ನಾನೇ ಅಡುಗೆ ಮಾಡ್ತೀನಿ. ನೀನು ರೆಸ್ಟ್ ತಗೊ' ಅಂದರು. ಅದಕ್ಕೆ ಆಕೆ 'ರೆಸ್ಟ್ ಅಂತೆ ರೆಸ್ಟು! ಈ ಮನೇಲಿ ರೆಸ್ಟ್ ಬೇರೆ ಕೇಡು, ದರಿದ್ರ' ಅಂದರು.

ಶಾರದಮ್ಮನವರ ಮುಂದೆ ಯಾರೇ ಆಗಲೀ ಈ ತರಹ ಮಾತನಾಡಿದ್ದೇ ಇಲ್ಲ! ಧೀಮಂತವಾದ ಹೆಂಗಸು ಆಕೆ. 'ಅದ್ಯಾಕೆ ಹಾಗೆಲ್ಲ ಅಪದ್ಧ ನುಡೀತಿದೀಯಾ? ಹಿರೀ ಸೊಸೆ ನೀನು. ನಿನ್ನಿಂದ ಬೇರೆಯವರು ಕಲೀಬೇಕು' ಅಂದಿದ್ದಕ್ಕೆ, ಆಕೆ 'ಸೊಸೆ ಅಂತೆ ಸೊಸೆ' ಅಂತ ಕೂಗಿ ತನ್ನೆರಡೂ ಕೈಗಳಿಂದ ಕೂದಲನ್ನ ಕಿತ್ತು ಕಿತ್ತು ಬಾಯಿಗೆ ತುರುಕಿಕೊಂಡರು!

ಶಾರದಮ್ಮನವರು ಎರಡುವಾರ ಇರೋಣ ಅಂತ ಬಂದಿದ್ದರೂ ಎರಡೇ ದಿನಕ್ಕೆ ಈ ವಾತಾವರಣ ತಡೆಯಲಾಗದೆ 'ಶ್ರೀನಿವಾಸೂ, ನನ್ನಕೈಲಿ ತಡಕೊಳ್ಳಕ್ಕೆ ಆಗಲ್ಲಪ್ಪ, ನಂಜನಗೂಡಿನ ಬಸ್ಸು ಹತ್ತಿಸಿಬಿಡು. ನಾನು ಹೇಗೋ ಅಲ್ಲಿ ಮನೆ ತಲುಪ್ತೀನಿ' ಅಂತ ದುಂಬಾಲು ಬಿದ್ದು ಹೊರಟರೆ ಅಹಲ್ಯಬಾಯಿ ಹೊರಡುವಾಗ 'ಅಯ್ಯೋ, ಒಂದೆರಡುವಾರ ಇರ್ತೀರಿ ಅಂದರೆ ಹೊರಟೇ ಬಿಟ್ಟರೆ,' ಅಂದು ಗೊಳೋ ಅಂತ ಅತ್ತು ಬಿಟ್ಟು ಶ್ರೀನಿವಾಸರಾಯರಿಗೆ ಮತ್ತೊಂದು ಸಂಗತಿ ನೆನಪಿಗೆ ತಂದರು. ಅದು ನಡೆದದ್ದು ಸ್ಕೂಲು ಇನ್‌ಸ್ಪೆಕ್ಟನ್ನು ಅಂತ ಶ್ರೀನಿವಾಸರಾಯರು ಶ್ರೀರಂಗಪಟ್ಟಣದಲ್ಲಿರುವ ಗೌರ್ನಮೆಂಟ್ ಸ್ಕೂಲಿಗೆ ಹೋದಾಗ! ಅಲ್ಲಿದ್ದ ಮ್ಯಾಥ್ಸ್ ಟೀಚರ್ರು ರಂಗರಾಯರು ಅಂತ, ಪಟ್ಟಣದವರೇ, ಶ್ರೀನಿವಾಸರಾಯರಿಗೆ ಪರಿಚಿತರು. ರಂಗರಾಯರು, ಶ್ರೀನಿವಾಸರಾಯರನ್ನು ಕುರಿತು ಮದುವೆ ಆಯಿತಂತೆ, ತಿಳೀತು, ಯಾರು ಹೆಣ್ಣು, ಅಂತೆಲ್ಲ ವಿಚಾರಿಸಿ ವಿವರ ತಿಳಿದ ತಕ್ಷಣ ಅಚಾನಕ್ ಆಗಿ 'ಅರ್ರೇ, ಹೌದೇ? ನಮ್ಮ ಶಿವಲೀಲೆ ಸುಬ್ಬರಾಯರ ಮಗಳೇ' ಅಂದು, ತಕ್ಷಣ ನಾಲಿಗೆ ಕಚ್ಚಿಕೊಂಡರು. ನಂತರದಲ್ಲಿ ಶ್ರೀನಿವಾಸರಾಯರು ವಿಚಾರಿಸಿದಾಗ ತಿಳಿದುಬಂತು. ಅಹಲ್ಯಬಾಯಿ ತಂದೆ ಸುಬ್ಬರಾಯರ ಮನೆ ಮೊದಲು ಇದ್ದದ್ದು ಗಂಜಾಂನಲ್ಲಂತೆ, ಆತ ದೇವಸ್ಥಾನದಲ್ಲಿ ಪೂಜೆಗೀಜೆ ಮಾಡಿಕೊಂಡಿದ್ದು ಒಂದು ಸಲ ಯಾವಾಗಲೋ ಮುಸ್ಸಂಜೆ ಹೊತ್ತಿನಲ್ಲಿ ಗೋಸಾಯಿಘಾಟ್‌ಗೆ ಹೋಗಿದ್ದಾಗ ಬಹಿರ್ದೆಸೆಗೆ ಅವಸರವಾಗಿ ಅಲ್ಲೇ ಪಾಳು ಬಿದ್ದ ಮಂಟಪವೊಂದರ ಪಕ್ಕ ಕೂತು, ಕಾರ್ಯಮುಗಿಸಿ ಎದ್ದು ಕತ್ತೆತ್ತಿ ನೋಡಿದರೆ ಅವರ ಎದುರು ಯಾವುದೋ ತಲೆಕೂದಲು ಕೆದರಿ ನಿಂತ ಹೆಂಗಸು ಇವರ ಕೈಹಿಡಿಯಲು ಕೈ ಚಾಚಿತಂತೆ. ಬೆಚ್ಚಿದ ಸುಬ್ಬರಾಯರ ವರ್ತನೆ ಅವತ್ತಿನಿಂದ ಪೂರ್ತಿ ಬದಲಾಗಿ ಕಡೇಗೆ ಅವರ ಹೆಸರು ಶಿವಲೀಲೆ ಸುಬ್ಬರಾಯರು ಅಂತಾಯಿತಂತೆ. ಶಿವಲೀಲೆ ಎಂದರೆ ಅವರ ಹುಟ್ಟಿದ ಊರು ಇರಬಹುದು ಅಂತ ಅಂದುಕೊಂಡಿದ್ದ ಶ್ರೀನಿವಾಸರಾಯರಿಗೆ, ತಮ್ಮ ಮಾವನವರಿಗೆ ಈ ರೀತಿ ಶಿವಲೀಲೆ ಎನ್ನೋ ಹೆಸರು ಅಂಟಿಕೊಂಡಿತು ಅಂತ ತಿಳಿದು ಬಹಳ ನಿರಾಸೆಯೇ ಆಯಿತು.

ಇದರೆಲ್ಲದರ ನಡುವೆ ಅಹಲ್ಯಬಾಯಿಯವರ ದೇಹದಲ್ಲಿ ಗಮನಾರ್ಹ ಬದಲಾವಣೆ ಆಗತೊಡಗಿತ್ತು. ಮೊದಲೇ ಆಕೆಯದು ಸಣ್ಣ ಶರೀರ. ಹೊಟ್ಟೆ ನಿಧಾನವಾಗಿ ದೊಡ್ಡದಾಗುತ್ತಾ